**ದಿನಾಂಕಃ 21.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ಆ ದೂರಿನಲ್ಲಿ ಇದ್ದ ವಿಷಯಗಳು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ಮಣಿಕಂಠ ಮತ್ತು ಪಾಪಣ್ಣ ಎನ್ನುವವರು. ನಾನು ಎಸಿಬಿ ಕಛೇರಿಗೆ ಹೋದಾಗ ಅಲ್ಲಿ ತನಿಖಾಧಿಕಾರಿಗಳು ನನ್ನನ್ನು ನಂಜನಗೂಡು ಟೌನ್ ನ ದೇವೀರಮ್ಮನಹಳ್ಳಿ ಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಈ ಆರೋಪಿತರನ್ನು ನೋಡಿದ್ದೆ. ಅದು ಅಂಬಿಕಾ ರವರ ಮನೆಯಾಗಿತ್ತು.

2. ಎಸಿಬಿ ಕಛೇರಿಗೆ ಹೋದಾಗ ತನಿಖಾಧಿಕಾರಿಯವರು ಅಲ್ಲಿದ್ದ ವಾಮನ ರಾವ್ ರವರನ್ನು ಪಂಚ ಸಾಕ್ಷಿ 1 ಎಂತಲು, ನನ್ನನ್ನು ಪಂಚ ಸಾಕ್ಷಿ 2 ಎಂತಲು ಹೆಸರಿಸಿದರು. ಅದಕ್ಕೆ ನಾನು ಒಪ್ಪಿದೆ. ಅಲ್ಲಿ ತನಿಖಾಧಿಕಾರಿಯಾಗಿ ಪೋಲೀಸ್ ಇನ್ಸ್ ಪೆಕ್ಟರ್ ಜೆ. ಶೇಖರ್ ಇದ್ದರು. ಅಲ್ಲಿ ದೂರುದಾರರಾದ ಶ್ರೀಮತಿ ಅಂಬಿಕಾ ಇದ್ದರು. ಆಕೆ ತನಿಖಾಧಿಕಾರಿಯ ಮುಂದೆ ಹಣವನ್ನು ಹಾಜರುಪಡಿಸಿದ್ದನ್ನು ನಾನು ನೋಡಿರುವುದಿಲ್ಲ. ಎಸಿಬಿ ಕಛೇರಿಯಲ್ಲಿ ನಡೆದ ಪ್ರಕ್ರಿಯಗಳ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

3. ಎಸಿಬಿ ಕಛೇರಿಯಲ್ಲಿ ಫಿರ್ಯಾದುದಾರಣು 500 ರೂ ಮುಖ ಬೆಲೆಯ 8000/–ರೂಗಳ 16 ನೋಟುಗಳನ್ನು ವಾಮನ್ ರಾವ್ ಗೆ ನೀಡಿದರು ಎನ್ನುವುದು ಸರಿ. ನಾನು ಆ ನೋಟುಗಳ ಕ್ರಮ ಸಂಖ್ಯೆಗಳು ಮತ್ತು ಮುಖ ಬೆಲೆಯನ್ನು ಒಂದು ಪ್ರತ್ಯೇಕ ಬಿಳಿಯ ಹಾಳೆಯ ಮೇಲೆ ಬರೆದುಕೊಂಡೆ ಎನ್ನುವುದು ಸರಿ. ಸದರಿ ದಾಖಲಾತಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಸದರಿ ದಾಖಲಾತಿಯನ್ನು ಸಾಕ್ಷಿ ಪರಿಶೀಲಿಸಿ , ಅದು ನನ್ನ ಕೈ ಬರವಣಿಗೆ ಎಂದು ಹೇಳಿರುತ್ತಾರೆ , ಮತ್ತು ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 2 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

4. ನಂತರ ಆ ಹಣವನ್ನು ಸಿಬ್ಬಂದಿಯವರ ಕೈಗೆ ನೀಡಲಾಯಿತು ಎನ್ನುವುದು ಸರಿ . ಅವರು ಸದರಿ ನೋಟುಗಳನ್ನು ಒಂದು ಪೇಪರ್ ಮೇಲೆ ಪ್ರತ್ಯೇಕವಾಗಿ ಇಟ್ಟು ಆ ನೋಟುಗಳ ಮೇಲೆ ಫಿನಾಪ್ತಲೀನ್ ಪೌಡರ್ ನ್ನು ಹಾಕಿದರು ಎನ್ನುವುದು ಸರಿ. ನಂತರ ಆ ನೋಟುಗಳನ್ನು ಪುನಃ ಜೋಡಿಸಿ ಪಂಚ ಸಾಕ್ಷಿ 1 ರವರಿಗೆ ಕೊಟ್ಟರು ಎನ್ನುವುದು ಸರಿ. ಅವರು ಸದರಿ ನೋಟುಗಳನ್ನು ಫಿರ್ಯಾದುದಾರರ ವ್ಯಾನಿಟಿ ಬ್ಯಾಗ್ ನಲ್ಲಿ ಇಟ್ಟರು ಎನ್ನುವುದು ಸರಿ . ಆ ವ್ಯಾನಿಟಿ ಬ್ಯಾಗ್ ಒಳಗೆ ಆ ನೋಟುಗಳನ್ನು ಇಡುವ ಮೊದಲು , ಎಸಿಬಿ ಸಿಬ್ಬಂದಿ ಆ ವ್ಯಾನಿಟಿ ಬ್ಯಾಗ್ ನ್ನು ಪರಿಶೀಲಿಸಿ ಅದರಲ್ಲಿ ಬೇರೆ ಹಣ ಇರುವುದಿಲ್ಲ ಎನ್ನುವುದನ್ನು ಖಚಿತ ಪಡಿಸಿಕೊಂಡರು ಎನ್ನುವುದು ಸರಿ . ನಾನು ಬಿಳಿಯ ಹಾಳೆಯಲ್ಲಿ ಬರೆದುಕೊಂಡಿದ್ದ ನೋಟುಗಳ ಸಂಖ್ಯೆ ಮತ್ತು ಮುಖ

ಬೆಲೆಯ ಹಾಳೆಯನ್ನು ವಾಮನ್ ರಾವ್ ಅವರಿಗೆ ಕೊಟ್ಟೆ ಎನ್ನುವುದು ಸರಿ. ಅಲ್ಲಿ ಉಳಿದಿದ್ದ ಫಿನಾಪ್ತಲೀನ್ ಪೌಡರ್ ನ್ನು ಒಂದು ಪ್ರತ್ಯೇಕ ಪ್ಯಾಕೆಟ್ ಗೆ ಹಾಕಿ ಸೀಲು ಮಾಡಿ ಅದರ ಮೇಲೆ ಚೀಟಿಯನ್ನು ಅಂಟಿಸಿ ನನ್ನ ಸಹಿಯನ್ನು ಪಡೆದರು ಎನ್ನುವುದು ಸರಿ . ಸಾಕ್ಷಿ ಸದರಿ ಪ್ಯಾಕೆಟ್ ಮೇಲಿರುವ ಚೀಟಿಯನ್ನು ನೋಡಿ ಅದರ ಮೇಲೆ ನನ್ನ ಸಹಿ ಇರುತ್ತದೆ ಎಂದು ಗುರುತಿಸಿರುತ್ತಾರೆ. ಆ ಪ್ಯಾಕೆಟ್ ನ ಒಳಗಡೆ ಇರುವ ಬಿಳಿಯ ಹಾಳೆಯಲ್ಲಿ ಇಟ್ಟಿದ್ದ ಫಿನಾಪ್ತಲೀನ್ ಪೌಡರ್ ನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಎಂ ಒ 8 ಎಂದು ಗುರುತುಪಡಿಸಿಕೊಳ್ಳಲಾಗಿದೆ. ನಂತರ ಅದನ್ನು ಎಸಿಬಿ ಕಛೇರಿಯ ಬೀರುವಿನಲ್ಲಿ ಇಟ್ಟರು ಎನ್ನುವುದು ಸರಿ .

5. ನಂತರ ಎಸಿಬಿ ಸಿಬ್ಬಂದಿ ಅಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಅದಕ್ಕೆ ವಾಮನ್ ರಾವ್ ರವರ ಎರಡೂ ಕೈಗಳ ಬೆರಳುಗಳನ್ನು ಅದ್ದಿಸಿದರು ಎನ್ನುವುದು ಸರಿ . ಆಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಎನ್ನುವುದು ಸರಿ . ನಂತರ ಆ ದ್ರಾವಣವನ್ನು ಒಂದು ಪ್ಲಾಸ್ಟಿಕ್ ಬಾಟಲಿನಲ್ಲಿ ಹಾಕಿ , ಮುಚ್ಚಿ , ಬಟ್ಟೆ ಕಟ್ಟಿ , ಮೊಹರು ಮಾಡಿ , ಅದರ ಮೇಲೆ ಚೀಟಿಯನ್ನು ಅಂಟಿಸಿ ನನ್ನ ಮತ್ತು ವಾಮನ್ ರಾವ್ ರವರ ಸಹಿಗಳನ್ನು ಪಡೆದುಕೊಂಡರು ಎನ್ನುವುದು ಸರಿ . ಸದರಿ ದ್ರಾವಣವನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 2 ಎಂದು ಗುರುತುಪಡಿಸಿಕೊಳ್ಳಲಾಗಿದೆ.

6. ನಂತರ ಚಾ,ಸಾ. 1 ರವರು ತಮ್ಮ ಮೊಬೈಲ್ ನ ಮೆಮೋರಿ ಕಾರ್ಡ ನ್ನು ತನಿಖಾಧಿಕಾರಿಗೆ ನೀಡಿದರು ಎನ್ನುವುದು ಸರಿ. ನಂತರ ಅದನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿದರು ಮತ್ತು ಆ ಸಂಭಾಷಣೆಯನ್ನು ಎಸಿಬಿ

ಸಿಬ್ಬಂದಿ ಟೈಪ್ ಮಾಡಿಕೊಂಡರು ಎನ್ನುವುದು ಸರಿ . ನಂತರ ಆ ಮೆಮೋರಿ ಕಾರ್ಡ ನ್ನು ತನಿಖಾಧಿಕಾರಿಯವರು ಒಂದು ಕವರ್ ಗೆ ಹಾಕಿ , ಮುಚ್ಚಿ , ಸೀಲು ಮಾಡಿ , ಚೀಟಿಯನ್ನು ಅಂಟಿಸಿ ನನ್ನ ಹಾಗೂ ವಾಮನ್ ರಾವ್ ರವರ ಸಹಿಯನ್ನು ಆ ಚೀಟಿಯ ಮೇಲೆ ಪಡೆದುಕೊಂಡರು ಎನ್ನುವುದು ಸರಿ . ಸದರಿ ಮೆಮೋರಿ ಕಾರ್ಡ ನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಆ ಸಂಭಾಷಣೆಯಲ್ಲಿ 1 ನೇ ಆರೋಪಿ ದೂರುದಾರರಲ್ಲಿ ರೂ.10,000/- ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದುದ್ದು ಕೇಳಿ ಬಂದಿತ್ತು ಅಲ್ಲವೇ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಆ ಸಮಯಕ್ಕೆ ನಾನು ವಾಶ್ ರೂಂಗೆ ಹೋಗಿದ್ದೆ ಎನ್ನುತ್ತಾರೆ.

7. "ಆರೋಪಿ 1 ಮತ್ತು ಆರೋಪಿ 2 ರವರು ಪೋನ್ ಸಂಭಾಷಣೆ ಮುಗಿದ ನಂತರದ ವಿಡಿಯೋ ಸಂಭಾಷಣೆಯಲ್ಲಿ ಫಿರ್ಯಾದಿ ಮತ್ತು 2 ನೇ ಆರೋಪಿತನ ಸಂಭಾಷಣೆಯಲ್ಲಿ ರೂ.10,000/- ಹಣ ಕೊಡುವಂತೆ 2 ನೇ ಆರೋಪಿ ಫಿರ್ಯಾದಿಗೆ ತಿಳಿಸಿ , ಆರ್ ಐ , ಶಿವಕುಮಾರ್ ಇವರ ವಿಚಾರವಾಗಿ ಚರ್ಚಿಸಿ , ನಂತರ ಹಣ ಕೊಟ್ರೆ ಖಾತೆ ಮಾಡಿಕೊಡುವುದಾಗಿ , ಇತ್ಯಾದಿಯಾಗಿ ಚರ್ಚಿಸಿರುವುದು ಕಂಡು ಬಂದಿರುತ್ತದೆ . ಈ ಎಲ್ಲಾ ಸಂಭಾಷಣೆಯನ್ನು ವಿವರವಾಗಿ ಮಹರ್ ನಲ್ಲಿ ನಮೂದಿಸಲಾಗಿದೆ. " ಎಂದು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೀರಿ ಅಲ್ಲವೆ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , 'ನೆನಪಿಲ್ಲ ' ಎನ್ನುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಪಿ 23 ಎಂದು ಗುರುತುಪಡಿಸಿಕೊಳ್ಳಲಾಯಿತು.

**ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.